(6) ಮುಂಬಯಿ ಬಾಂಬ್ ಸ್ಫೋಟದಲ್ಲಿ ಪ್ರಮುಖ ಆರೋಪಿ ಮೆಮೋದ್ ಸೋದರನಿಗೆ ಧಾರವಾಡ ಜಿಲ್ಲಾ ಪೋಲೀಸರಿಂದ ಬಂದೂಕ.

ಶ್ರೀ ಜಗದೀಶ್ ಎಸ್. ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉಪಾಧ್ಯಕ್ಷರೆ, ಮುಂಬಯಿ ಬಾಂಬ್ ಸ್ಫೋಟದಲ್ಲಿ ಪ್ರಮುಖ ಆರೋಪಿ ಮೆಮೋನ್ ಸೋದರನಿಗೆ ಧಾರವಾಡ ಜಿಲ್ಲಾ ಪೋಲೀಸರು ಬಂದೂಕ ನೀಡಿರುವ ವಿಷಯ ತೀರಾ ಗಂಭೀರವಾದದ್ದು ಇದ್ದು ಈ ಪ್ರಕರಣದಲ್ಲಿ ಒಳಗೊಂಡಿರುವ ಪೋಲಿಸ್ ಅಧಿಕಾರಿಗಳು ಯಾರ್ಯಾರು? ಅವರ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? ವಿಚಾರಣೆ ಯಾವ ಹಂತದಲ್ಲಿದೆ? ಮತ್ತು ಆದಷ್ಟು ಶೀಘ್ರ ಈ ಪ್ರಕರಣದ ವಿವರಗಳನ್ನು ಒದಗಿಸಬೇಕು ಎಂದು ನಾನು ಮಾನ್ಯ ಗೃಹ ಮಂತ್ರಿಗಳನ್ನು ಈ ಮೂಲಕ ವಿನಂತಿಸುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ?

ಪೋಲಿಸ್ ಕಮೀಷನರ್ ಹುಬ್ಬಳ್ಳಿ-ಧಾರವಾಡ ರವರ ಕಛೇರಿಯಿಂದ ಮುಂಬಾಯಿ ಸರಣಿ ಸ್ಫೋಟಕ್ಕೆ ಕಾರಣರಾದ ಮೆಮನ್ ಸಹೋದರರಿಗೆ ರಿವಲ್ವಾರ್ ಲೈಸೆನ್ಸ ನವೀಕರಿಸಿದ ವಿಷಯವು ತುಂಬ ಗಂಭೀರವಾದುದ್ದು. ಈ ಸಂಬಂಧದಲ್ಲಿ ಶ್ರೀ ರವೀಂದ್ರ ಪ್ರಸಾದ್ ಆಗಿನ ಡಿ.ಸಿ.ಪಿ. ಕಾನೂನು ಮತ್ತು ಸುವ್ಯವಸ್ಥೆ, ಹುಬ್ಬಳ್ಳಿ-ಧಾರವಾಡ ರವರು ನೀಡಿದ ದೂರಿನ ಆಧಾರದ ಮೇಲೆ ದಿನಾಂಕ 1.10.93 ರಂದು ಹುಬ್ಬಳ್ಳಿ ನಗರ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ 197/93 ಕಲಂ 420,177,444,471 ಸಹ ಕಲಂ 34 ಐಸಿಸಿ ಹಾಗೂ 27 ಮತ್ತ 30 ಇಂಡಿಯನ್ ಆರ್,ಸ್ ಆಕ್ಟ ಈ ಕೆಳಗಿನ ಅಪರಾಧಿಗಳ ಮೇಲೆ ಪ್ರಕರಣ ದಾಖಲು ಮಾಡಲಾಯಿತು.

1. ಮೆಮನ್ ಇಬ್ರಾಹಿಂ
2. ಮೊಹಮದ್ ಅಹಮದ್ ಫೋಸ್
3. ಯಲ್ಲಪ್ಪ ಪರಶುರಾಮಪ್ಪ ಪವಾರ
4. ಬಸವಂತಪ್ಪ ನಾಗಪ್ಪ
5. ಶಶಿಧರ ರಾಜಶೇಖರ ಉಳ್ಳಾ ಗಡ್ಡಿ ಮಠ
6. ವಿಶ್ವಪ್ರಕಾಶ ಉಳ್ಳಾ ಗಡ್ಡಿಮಠ.

ಇವರ ದೂರಿನ ಸಾರಾಂಶವೇನೆಂದರೆ ಬಾಂಬೆಯಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ ಪ್ರಮುಖ ಆರೋಪಿಗಳಾದ ಮೆಮನ್ ಇಬ್ರಾಹಿಂ ಮತ್ತು ಮಹಮದ್ ದೋಸಾ ಇವರು ಇವರು ಹುಬ್ಬಳ್ಳಿಗೆ ಬಂದು ಹುಬ್ಬಳ್ಳಿಯ ಬಂದೂಕು ಮತ್ತು ಗುಂಡುಗಳ ವ್ಯಾಪಾರಿಗಳಾದ ಶಶಿಧರ ಉಳ್ಳಾಗಡ್ಡಿಮಠ್ ಹಾಗೂ ವಿಶ್ವಪ್ರಕಾಶ್ ಉಳ್ಳಾ ಗಡ್ಡಿಮಠ ಇವರುಗಳನ್ನು ಸಂಪರ್ಕಿಸಿ. ಇವರುಗಳ ಸಹಾಯದಿಂದ ತಾವು ಹುಬ್ಬಳ್ಳಿಯಲ್ಲಿ ವಾಸಿಸುವುದಾಗಿಯೂ ಮತ್ತು ಹುಬ್ಬಳ್ಳಿಗೆ ತಮ್ಮ ವ್ಯಾಪಾರವನ್ನು ಸ್ಥಳಾಂತರಿಸಿರುವುದಾಗಿಯೂ ಸುಳ್ಳು ದಾಖಲೆ ಪತ್ರಗಳನ್ನು ತಯಾರಿಸಿ, ಅಲ್ಲದೆ ತಾವು ಹುಬ್ಬಳ್ಳಿಯಲ್ಲಿ

ಸಿಲಿಜನ್ ರಸ್ತೆಯಲ್ಲಿರುವ ರಾಘವೇಂದ್ರ ಕಾಂಪ್ಲೆಕ್ಸ ಹಾಗೂ ಪ್ರಶಾಂತ ಕಾಲೋನಿ ವಿದ್ಯಾನಗರದಲ್ಲಿ ವಾಸಿಸುವುದಾಗಿ ಸುಳ್ಳು ದಾಖಲೆ ಪತ್ರಗಳನ್ನು ತಯಾರಿಸಿ ಅದರೊಂದಿಗೆ ತಮಗೆ ಈ ಮೊದಲ ಹರಿಯಾಣ ರಾಜ್ಯದ ಸಿರ್ಸಾ ಜಿಲ್ಲೆಯ ಎಸ್.ಡಿ.ಎಂ.ರವರಿಂದ ರಿವಾಲ್ವಾರ್ ಹೊಂದಲು ಆಲ್ ಇಂಡಿಯಾ ಲೈಸನ್ಸ 1987 ರಲ್ಲಿ ದೊರೆತಿದ್ದು ಮತ್ತು ಅವುಗಳ ಅವಧಿ 1989ಕ್ಕೆ ಮುಗಿದಿದ್ದು, ಅವುಗಳನ್ನು ನವೀಕರಿಸಿ ಬಂದೂಕು ಲೈಸನ್ಸ ಪಡೆಯಲು ಅರ್ಜಿ ಕೊಟ್ಟಿರುತ್ತಾರೆ. ಸದರಿ ಅರ್ಜಿಗಳನ್ನು ಬಂದೂಕು ವ್ಯಾಪಾರಿಗಳಾದ ಉಳ್ಳಾಗಡ್ಡಿಮಠ ಸಹೋದರರಲ್ಲಿ ಕೆಲಸ ಮಾಡುವ ಯಲ್ಲಪ್ಪ ಪವಾರ್ ಇವರಿಂದ ತಯಾರಿಸಿ ಅರ್ಜಿಗಳನ್ನು ಸಿ.ಓ.ಪಿ. ಕಛೇರಿಯಲ್ಲಿ ಕೆಲಸಮಾಡುವ ಶಾಖಾಧಿಕಾರಿ ಬಸವಂತಪ್ಪ ಇವರ ಕಡೆ ಕೊಟ್ಟು ಇವುಗಳನ್ನು ಡಿ.ಸಿ.ಪಿ.(ಕಾ. ಮತ್ತು ಸು.) ಇವರ ಗಮನಕ್ಕೆ ತಾರದೆ ಮತ್ತು ಅವುಗಳನ್ನು ಸ್ಥಳೀಯ ಪೋಲೀಸರಿಂದ ವಿಚಾರಣೆಗಾಗಿ ಕಳುಹಿಸದೆ, ಡಿ.ಸಿ.ಪಿ.ರವರ ಕಣ್ಣು ತಪ್ಪಿಸಿ ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿಸಿದ್ದಾರೆಂದು ಗೊತ್ತಿದ್ದರು ಸಹ ಡಿ.ಸಿ.ಪಿ.ರವರ ಸಹಿ ತೆಗೆದುಕೊಂಡು ಅರ್ಜಿ ಕೊಟ್ಟು ಎರಡನೇ ದಿವಸವೇ ಅವರಿಗೆ ರಿವಾಲ್ವಾರ್ ಲೈಸನ್ಸ ನವೀಕರಿಸಿ ಕೊಟ್ಟಿದ್ದು ಅಲ್ಲದೆ ತಾ|| 30.6.91 ರೊಳಗೆ ರಿವಾಲ್ವಾರನ್ನು ಖರೀದಿ ಮಾಡಬೇಕೆಂದು ಕೊಟ್ಟಿರುತ್ತಾರೆ.

ಈ ಪ್ರಕರಣದ ತಪಾಸಣೆಯನ್ನು ತ್ವರಿತವಾಗಿ ಮುಗಿಸಲು ಸಿ.ಓ.ಡಿ.ಗೆ ದಿನಾಂಕ 10.12.93 ರಂದು ಕಳುಹಿಸಿದ್ದು, ಸಿ.ಓ.ಡಿ. ಇನ್ಸಪೆಕ್ಟರ್‌ರಾದ ಶ್ರೀ ಎನ್. ಎಂ. ಹೊನ್ನಾಳ್ ವಿಚಾರಣೆಗೆ ಆದೇಶಿಸಿದ್ದು, ಡಿವೈ.ಎಸ್.ಪಿ.ಡಿ.ಇ. ಉತ್ತರ ವಲಯ, ಬೆಳಗಾವಿರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಯಿತು. ಪ್ರಸ್ತುತ, ವಿಚಾರಣೆ ಪ್ರತಿರಕ್ಷಣಾ ಹೇಳಿಕೆ ಪಡೆಯುವ ಹಂತದಲ್ಲಿದೆ. ದಿನಾಂಕ 6.5.95ರಲ್ಲಿ ಇವರನ್ನು ಇಲಾಖಾ ವಿಚಾರಣೆ ಬಾಕಿ ಉಳಿಸಿ ಅಮಾನತ್ತಿನಿಂದ ಬಿಡುಗಡೆ ಮಾಡಲಾಗಿದೆ.

ಈ ಮಧ್ಯ ದಿನಾಂಕ 13.6.94 ರಂದು ಶ್ರೀ ಬಸವಂತಪ್ಪ ಜೆ., ಆಗಿನ ಶಾಖಾಧೀಕ್ಷಕರು ಪೋಲೀಸ್ ಕಮೀಷನರ್, ಹುಬ್ಬಳ್ಳಿ -ಧಾರವಾಡ ರವರ ಕಛೇರಿ ಅವರನ್ನು ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಿಲು ಅನುಮತಿ ನೀಡಲಾಯಿತು. ಈ ಪ್ರಕರಣದಲ್ಲಿ ದಿನಾಂಕ 1.10.91ರಂದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದೆ.

ಶ್ರೀ ಟಿ.ಜಿ. ದೊರೆಸ್ವಾಮಿ ನಾಯಕ್, ಐ.ಪಿ.ಎಸ್. ಈಗ ಡಿ.ಸಿ.ಪಿ., ಸಿ.ಎ.ಆರ್., ಕೇಂದ್ರ ಸ್ಥಾನ, ರವರ ಮೇಲೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಆದೇಶ ಸಂಖ್ಯೆ ಡಿಪಿಪಿಆರ್ 162 ಎಸ್.ಪಿ.ಎಸ್. 94, ದಿನಾಂಕ 21.6.95ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು ಐ.ಜಿ.ಪಿ. ತರಬೇತಿ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು ಮೂಲ ದಾಖಲೆಗಳ ಕೊರತೆಯಿಂದ ವಿಚಾರಣೆ ಪ್ರಾರಂಭವಾಗಿಲ್ಲ, ಮೂಲ ದಾಖಲಾತಿಗಳನ್ನು ವಿಚಾರಣಾಧಾಕಾರಿಗಳು ಪಡೆದ ನಂತರ ಇಲಾಖಾ ವಿಚಾರಣೆ ಪ್ರಾರಂಭವಾಗುತ್ತದೆ.

ರವರು ಸದರಿ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡು ಮುಂದುವರಿಸಿದ್ದು, ಅವರ ವರ್ಗಾವಣೆ ನಂತರ ಎಸ್.ಎಸ್. ಪಾಟೀಲ್‌ರವರಿಗೆ ವಹಿಸಲಾಯಿತು.

ಸಿ.ಓ.ಡಿ. ದಿನಾಂಕ28.3.94 ರಂದು ತನ್ನ ವರದಿಯಲ್ಲಿ ಹುಬ್ಬಳ್ಳಿ-ಧಾರವಾಡ ಕಮೀಷನರೇಟಿನ ಆಗಿನ ಡಿ.ಸಿ.ಪಿ.ಗಳಾದ ಸರ್ವ ಶ್ರೀ ಟಿ.ಜಿ. ದೊರೆಸ್ವಾಮಿ ನಾಯಕ್ ಮತ್ತು ಸೈಯದ್ ಉತ್ಸತ್ ಹುಸೇನ್ ಹಾಗೂ ಶಾಖಾಧೀಕ್ಷಕರಾದ ಶ್ರೀ ಜೆ. ಬಸವಂತಪ್ಪ ರವರುಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಮತ್ತು ಮೆಮನ್ ಸಹೋದರರಿಗೆ ರಿವಲ್ವಾರ್ ಲೈಸನ್ಸ್ ನವೀಕರಿಸುವಲ್ಲಿ ಕ್ರಮಬದ್ಧವಾದ ವಿಚಾರಣೆ ಮಾಡದೇ ನವೀಕರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ.

ಸಿ.ಓ.ಡಿ. ದಿನಾಂಕ 1.18.94 ರಂದು ಕಂಡಿಕೆ 1ರಲ್ಲಿ ಸೂಚಿಸಿರುವ ಆರು(6) ಆರೋಪಿಗಳ ವಿರುದ್ಧ ದೋಷಾರೋಪಣೆಯನ್ನು ಜೆ.ಎಂ.ಎಫ್.ಸಿ. ಹುಬ್ಬಳ್ಳಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಪ್ರಕರಣ ವಿಚಾರಣೆ ಹಂತದಲ್ಲಿದ್ದು ದಿನಾಂಕ 7.3.96ರಂದು ವಿಚಾರಣೆಗೆ ನಿಗಧಿಪಡಿಸಲಾಗಿದೆ. ಈ ಪ್ರಕರಣದ ಪ್ರಮುಖ ಆರೋಪಿಗಳಾದ 1. ಮೆಮನ್ ಇಬ್ರಾಹಿಂ ಹಾಗೂ ಮಹಮದ್ ಅಹಮದ್ ದೋಸಾ ರವರು ತಲೆ ಮರೆಸಿಕೊಂಡಿದ್ದು ಅವರ ವಿರುದ್ಧ ನಾನ್ ಬೈಲಬಲ್ ವಾರೆಂಟ್ ಅನ್ನು ನ್ಯಾಯಾಲಯ ಹೊರಡಿಸಿದೆ.

ಪೋಲೀಸ್ ಕಮೀಷನರ್ ಹುಬ್ಬಳ್ಳಿ- ಧಾರವಾಡರವರ ದಿನಾಂಕ 14.1.94ರ ಪತ್ರದ ಆಧಾರದ ಮೇಲೆ ಶ್ರೀ ಜೆ. ಬಸವಂತಪ್ಪ ಶಾಖಾಧೀಕ್ಷಕರವರನ್ನು ದಿನಾಂಕ 22.4.94ರಲ್ಲಿ ಅಮಾನತ್ತಿನಲ್ಲಿಟ್ಟು ನಂತರ ದಿನಾಂಕ 12.7.94ರಲ್ಲಿ ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿದ್ದು ಡಿವೈ.ಎಸ್.ಪಿ. ಡಿ.ಇ. ಉತ್ತರ ವಲಯ, ಬೆಳಗಾವಿರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಯಿತು. ಪ್ರಸ್ತುತ, ವಿಚಾರಣೆ ಪ್ರತಿರಕ್ಷಣಾ ಹೇಳಿಕೆ ಪಡೆಯುವ ಹಂತದಲ್ಲಿದೆ. ದಿನಾಂಕ 6.5.95ರಲ್ಲಿ ಇವರನ್ನು ಇಲಾಖಾ ವಿಚಾರಣೆ ಬಾಕಿ ಉಳಿಸಿ ಅಮಾನತ್ತಿನಿಂದ ಬಿಡುಗಡೆ ಮಾಡಲಾಗಿದೆ.

ಈ ಮಧ್ಯೆ ದಿನಾಂಕ 13.6.94ರಂದು ಶ್ರೀ ಬಸವಂತಪ್ಪ ಜೆ, ಆಗಿನ ಶಾಖಾಧೀಕ್ಷಕರು ಪೋಲೀಸ್ ಕಮೀಷನರ್, ಹುಬ್ಬಳ್ಳಿ-ಧಾರವಾಡ ರವರ ಕಛೇರಿ ಅವರನ್ನು ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಅನುಮತಿ ನೀಡಲಾಯಿತು. ಈ ಪ್ರಕರಣದಲ್ಲಿ ದಿನಾಂಕ 1.10.94ರಂದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದೆ.

ಶ್ರೀ ಟಿ.ಜಿ. ದೊರೆಸ್ವಾಮಿ ನಾಯಕ್, ಐ.ಪಿ.ಎಸ್. ಈಗ ಡಿ.ಸಿ.ಪಿ. ಸಿ.ಎ.ಆರ್. ಕೇಂದ್ರ ಸ್ಥಾನ ರವರ ಮೇಲೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಆದೇಶ ಸಂಖ್ಯೆ ಡಿಪಿಪಿಆರ್ 162 ಎಸ್.ಪಿ.ಎಸ್.94, ದಿನಾಂಕ 21.6.95ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು ಐ.ಜಿ.ಪಿ. ತರಬೇತಿ ರವರನ್ನು ವಿಚಾರಣಾಧಿಕಾರಿಯನ್ನಾಗಿ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳು ಪಡೆದು ನಂತರ ಇಲಾಖಾ ವಿಚಾರಣೆ ಪ್ರಾರಂಭವಾಗುತ್ತದೆ.

ಶ್ರೀ ಸೈಯದ್ ಉಲ್ಫತ್ ಹುಸೇನ್ ಈಗಿನ ಡಿ.ಸಿ.ಪಿ., ಅಪರಾಧ, ಬೆಂಗಳೂರು ರವರ ಮೇಲೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಸರ್ಕಾರವು ಆದೇಶ ಸಂಖ್ಯೆ : ಒಇ 182 ಪೊಸಿಪ 94, ದಿನಾಂಕ 29.11.94/2.12.94ರಲ್ಲಿ ಐ.ಜಿ.ಪಿ. ತರಬೇತಿರವರನ್ನು

ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು ಮೂಲ ದಾಖಲೆಗಳ ಕೊರತೆಯಿಂದ ಇಲಾಖಾ ವಿಚಾರಣೆ ಪ್ರಾರಂಭವಾಗಿಲ್ಲ. ಮೂಲ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳು ಪಡೆದ ನಂತರ ವಿಚಾರಣೆ ಪ್ರಾರಂಭವಾಗುತ್ತದೆ.

ಮೂಲ ದಾಖಲಾತಿಗಳನ್ನು ಶೀಘ್ರವಾಗಿ ಪಡೆದು ವಿಚಾರಣೆಯನ್ನು ಆದಷ್ಟು ಬೇಗೆ ಮುಕ್ತಾಯಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉಪಾಧ್ಯಕ್ಷರು : ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸೇರುವುದು.

ಸಭೆಯು ಮಧ್ಯಾಹ್ನ 1-52ಕ್ಕೆ ಮುಂದೂಲ್ಪಟ್ಟು ಪುನಃ 3 ಗಂಟೆಗೆ ಸೇರುವುದಾಗಿ ನಿಶ್ಚಯಿಸಿತು.

ಸಭೆಯು ಮಧ್ಯಾಹ್ನ 3-10ಕ್ಕೆ ಸಮಾವೇಶಗೊಂಡಿತು.

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಎಂ.ಎಸ್. ಪಾಟೀಲ್) ರವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು).

ಶಾಸನ ರಚನಾ ಕಾರ್ಯಕಲಾಪ

ಎ) ಪರ್ಯಾಲೋಚನಾ ಪ್ರಸ್ತಾವ.

(1) ಭೂಸುಧಾರಣೆ ತಿದ್ದುಪಡಿ ಮೇಲಿನ ಮುಂದುವರಿದ ಚರ್ಚೆ.

+ ಶ್ರೀ ಜೆ.ಪಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಉಪಾಧ್ಯಕ್ಷರೇ ಕಳೆದ ಸಂದರ್ಭದಲ್ಲಿ ಮಾತನಾಡುತ್ತಾ ಅರ್ಧಕ್ಕೆ ನಿಲ್ಲಿಸಿದ್ದೆ. ಇದರಲ್ಲಿ ಮುಖ್ಯ ಅಂಶ, ಏಕೆಂದರೆ ಕಾನೂನಿನ ಅಂಶಗಳನ್ನೆಲ್ಲಾ ಇಲ್ಲಿ ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಮುಖ್ಯವಾಗಿ 109 ಸೆಕ್ಷನ್‌ನ ತಿದ್ದುಪಡಿಗೆ ತರತಕ್ಕಂತಹ ಅಂಶಗಳೇನಿವೆ ಎಂದರೆ ಒಂದು, ಸರ್ಕಾರ ತಾನು ಬಯಸಿದಲ್ಲಿ ಎಷ್ಟೇ ಭೂಮಿಯನ್ನಾದರೂ ಪಡೆಯಬಹುದೆಂಬುದಕ್ಕೆ ಅವಕಾಶವೇನಿದೆ ಅದು ನಿಜವಾಗಿಯೂ ಕೂಡ ಬಹಳ ಅಪಾಯಕಾರಿಯಾದು. ಏಕೆಂದರೆ ಇವತ್ತು ಈ ಸರ್ಕಾರ ಇರಬಹುದು ನಾಳೆ ಇನ್ನೊಂದು ಸರ್ಕಾರ ಬರಬಹುದು. ಯಾವುದೇ ಸರ್ಕಾರ ಕೃಷಿ ಭೂಮಿಯನ್ನು ತನಗಿಷ್ಟ ಬಂದರೀತಿಯಲ್ಲಿ ಯಾವುದೇ ಸಂದರ್ಭದಲ್ಲಿ ತೆಗೆದು ಕೊಳ್ಳಬಹುದೆಂಬುದು ಒಂದನೆಯದು ಕೃಷಿ ಕ್ಷೇತ್ರಕ್ಕೆ ಆಗುವ ದೊಡ್ಡ ಆಘಾತ. ಎರಡನೆಯದು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವುದು ಕೃಷಿ ಉತ್ಪಾದನೆಗಾಗುವ ಇನ್ನೊಂದು ದೊಡ್ಡ ಹೊಡೆತ. ಅದರ ಜೊತೆಯಲ್ಲೇ 109 1ಎ 1, 2ರಲ್ಲಿರುವ ವಿದ್ಯಾಸಂಸ್ಥೆಗಳಿಗೆ ಬೇರೆ ಸಂಸ್ಥೆಗಳಿಗೆ ಇಂತಿಷ್ಟು ಭೂಮಿ ಪಡೆಯಬಹುದೆಂಬ ಅವಕಾಶವಿದೆ. ಈಗಾಗಲೇ ಕರ್ನಾಟಕದಲ್ಲಿ ಹಲವಾರು ಸಂದರ್ಭಗಳಲ್ಲಿ ನಮ್ಮೆಲ್ಲರ ಗಮನಕ್ಕೂ ಬಂದಿರುವ ವಿಷಯ, ವಿದ್ಯಾಸಂಸ್ಥೆಗಳ ಹೆಸರಿನಲ್ಲಿ ಎಕರೆಗಟ್ಟಲೆ ಭೂಮಿಯನ್ನು ಪಡೆದಿದ್ದಾರೆ. ಆದರೆ ಯಾವ ಉದ್ದೇಶಕ್ಕಾಗಿ ಭೂಮಿ ಪಡೆಯುತ್ತಾರೋ ಆ ಉದ್ದೇಶಕ್ಕೋಸ್ಕರ ಉಪಯೋಗಿಸುವ ಪರಿಸ್ಥಿತಿ ಬಹಳ ಕನಿಷ್ಟ. ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸುತ್ತಾರೆ. ಆದರೆ ಭೂಮಿಯನ್ನು ಪಡೆದುಕೊಳ್ಳುವುದು ವಿದ್ಯಾಸಂಸ್ಥೆಗಳ ಹೆಸರಿನಲ್ಲಿ.